# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002

***ಪತ್ರಿಕಾ ಪ್ರಕಟಣೆ*** **ದಿನಾಂಕ: 21.09.2011**

ಇಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೂಜ್ಯ ಮಹಾಪೌರರಾದ ಶ್ರೀಮತಿ ಶಾರದಮ್ಮ ರವರು ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೊಳಪಡುವ ವಾರ್ಡ್ ಸಂಖ್ಯೆ: 118, 119 ಮತ್ತು 145ರಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳ ತಪಾಸಣೆಯನ್ನು ಸ್ಥಳೀಯ ಶಾಸಕರಾದ ಡಾ|| ಡಿ. ಹೇಮಚಂದ್ರ ಸಾಗರ್ ರವರೊಂದಿಗೆ ಭೇಟಿ ನೀಡಿ ಪರಿಶೀಲಿಸಿದರು.

ನಗರದ ಕೆ.ಆರ್. ಮಾರುಕಟ್ಟೆ ಪ್ರದೇಶದಲ್ಲಿ ನಿರ್ಮಾಣವಾಗುತ್ತಿರುವ ಪಾದಚಾರಿ ಸುರಂಗ ಮಾರ್ಗವು ನಿಧಾನಗತಿಯಲ್ಲಿ ಸಾಗುತ್ತಿರುವುದನ್ನು ಗಮನಿಸಿದ ಮಹಾಪೌರರು ಗುತ್ತಿಗೆದಾರರ ವಿರುದ್ಧ ತುಂಬಾ ಬೇಸರ ವ್ಯಕ್ತಪಡಿಸಿದಾಗ, ಗುತ್ತಿಗೆದಾರರು ಜಲಮಂಡಳಿಯ ಪೈಪು ಈ ಮಾರ್ಗದಲ್ಲಿ ಹಾದುಹೋಗಿರುವುದರಿಂದ ತಡವಾಗುತ್ತಿದೆಯೆಂದು ಕುಂಟುನೆಪ ಹೇಳಲು ಯತ್ನಿಸಿದರು. ಅದಕ್ಕೆ ಮಹಾಪೌರರು ಸದರಿ ಕಾಮಗಾರಿಯು ಡಿಸೆಂಬರ್ ಅಂತ್ಯದೊಳಗೆ ಪೂರ್ಣಗೊಳಿಸಬೇಕು. ಅದಕ್ಕೆ ಅಗತ್ಯವಾದ ಎಲ್ಲಾ ಸಹಕಾರವು ಪಾಲಿಕೆಯಿಂದ ನೀಡಲಿದೆ. ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸದಿದ್ದಲ್ಲಿ ಸೂಕ್ತ ಕ್ರಮವನ್ನು ಕೈಗೊಳ್ಳಲಾಗುವುದೆಂದು ಎಚ್ಚರಿಕೆ ನೀಡಿದರು.

ನಂತರ ಜೆ.ಸಿ. ರಸ್ತೆಯಲ್ಲಿರುವ ವಾಹನ ನಿಲ್ದಾಣ ಸಂಕೀರ್ಣಕ್ಕೆ ಭೇಟಿ ನೀಡಿದಾಗ, ಅಲ್ಲಿ ಕಾರುಗಳ ನಿಲುಗಡೆ ಬದಲು ಮೆಕ್ಯಾನಿಕ್ ಕೆಲಸ ನಡೆಯುತ್ತಿರುವುದನ್ನು ಕಂಡು ಸಿಡಿಮಿಡಿಗೊಂಡರು. ಕೂಡಲೇ ಮೆಕ್ಯಾನಿಕ್ ಕೆಲಸವನ್ನು ಸ್ಥಗಿತಗೊಳಿಸಿ, ಸದರಿ ಜಾಗದಲ್ಲಿ ಕಾರುಗಳ ನಿಲುಗಡೆಗೆ ಮಾತ್ರ ಅವಕಾಶ ಮಾಡಿಕೊಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಮಹಾಪೌರರು ಸೂಚಿಸಿದರು. ಮತ್ತು ಟೌನ್‌ಹಾಲ್ ಮುಂಭಾಗದಿಂದ ಮೈಸೂರು ರಸ್ತೆ ಫ್ಲೈಓವರ್ ರಸ್ತೆಯವರೆಗೂ ರಸ್ತೆ ವಿಭಜಕ ಹಾಕಿಸಿ, ಟ್ರಾಫಿಕ್ ಜಾಮ್ ಆಗುವುದನ್ನು ತಪ್ಪಿಸಬೇಕೆಂದು ಸಂಬಂಧಪಟ್ಟ ಅಭಿಯಂತರರಿಗೆ ಮಹಾಪೌರರು ಸೂಚಿಸಿದರು.

ಸಿಟಿ ಮಾರುಕಟ್ಟೆಯಲ್ಲಿರುವ ಬಸ್ ನಿಲ್ದಾಣದ ಬಳಿ ಕೆಲವು ಅಂಗಡಿ ಮಾಲೀಕರು ಅನಧಿಕೃತವಾಗಿ ಪಾದಚಾರಿ ರಸ್ತೆಯನ್ನು ಒತ್ತುವರಿ ಮಾಡಿರುವುದರಿಂದ ಸಂಚಾರಕ್ಕೆ ತೀವ್ರ ಅಡಚಣೆ ಉಂಟಾಗಿರುವುದನ್ನು ಕಂಡ ಉಪ ಮಹಾಪೌರರಾದ ಶ್ರೀ ಎಸ್. ಹರೀಶ್ ರವರು ಅಂಗಡಿ ಮಾಲೀಕರನ್ನು ತೀವ್ರ ತರಾಟೆಗೆ ತೆಗೆದುಕೊಂಡರು. ಈ ಸಂದರ್ಭದಲ್ಲಿ ಕೆಲವು ಅಂಗಡಿಯವರು ಲೈಸೆನ್ಸ್‌ನ್ನು ನವೀಕರಿಸದೇ ಇರುವುದು ಕಂಡು ಬಂದಿತು. ಅನಧಿಕೃತವಾಗಿ ನಿರ್ಮಿಸುವ ಅಂಗಡಿಗಳನ್ನು ಇಂದು ಸಂಜೆಯೊಳಗೆ ತಾವೇ ತೆರವುಗೊಳಿಸಬೇಕೆಂದು ಉಪ ಮಹಾಪೌರರು ಮಾಲೀಕರಿಗೆ ಎಚ್ಚರಿಕೆ ನೀಡಿದರು. ಇದಕ್ಕೆ ಸಂಚಾರಿ ಪೋಲೀಸರೂ ಸಹ ಸಹಕರಿಸಿದರು.

ಕೆ.ಆರ್. ಮಾರುಕಟ್ಟೆಯ ಫ್ಲೈಓವರ್ ಬಳಿ ಹಾಗೂ ಮಸೀದಿಯ ಸಮೀಪ ಗಲೀಜು, ಕೊಳಕು ನೀರು, ಕಸ ತೆಗೆಯದೇ ಇರುವುದನ್ನು ಗಮನಿಸಿದ ಆಡಳಿತ ಪಕ್ಷದ ನಾಯಕರಾದ ಶ್ರೀ ಬಿ.ಆರ್. ನಂಜುಂಡಪ್ಪ ರವರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡು, ಉತ್ತಮ ರೀತಿಯಲ್ಲಿ ಕೆಲಸ ಮಾಡುವ ಇಚ್ಛೆ ಇದ್ದರೆ ಮಾತ್ರ ಮಾಡಿ ಇಲ್ಲದಿದ್ದರೆ ಬೇರೆಡೆ ಹೋಗಿ, ಬೇರೆ ಅಧಿಕಾರಿಗಳನ್ನು ನೇಮಿಸುತ್ತೇವೆಂದು ಕಠೋರವಾಗಿ ಪ್ರಶ್ನಿಸಿದರು. ಈ ಸಂದರ್ಭದಲ್ಲಿ ಶಾಸಕರಾದ ಡಾ|| ಡಿ. ಹೇಮಂಚಂದ್ರ ಸಾಗರ್ ರವರು ಮಾತನಾಡಿ, ಕಸ ತೆಗೆಯದೇ ಇರುವ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಿ ಎಂದು ಸಲಹೆ ನೀಡಿದರು.

ತದನಂತರ, ಕಲಾಸಿಪಾಳ್ಯದ ಬಳಿ ಐದೂವರೆ ಎಕರೆ ಪ್ರದೇಶದಲ್ಲಿ ಸುಸಜ್ಜಿತ ಬಸ್‌ಸ್ಟ್ಯಾಂಡ್ ನಿರ್ಮಾಣ ಜಾಗವನ್ನು ಪರಿಶೀಲಿಸಿದ ಮಹಾಪೌರರಿಗೆ ಸದಸ್ಯರಾದ ಶ್ರೀ ಧನರಾಜ್ ಅವರು ಈ ಪ್ರದೇಶ ಖಾಸಗಿಯವರಿಂದ ಒತ್ತುವರಿಯಾಗುವ ಸಾಧ್ಯತೆಗಳಿವೆ. ಹಾಗಾಗಿ ಈ ಜಾಗಕ್ಕೆ ಕಾಂಪೌಂಡ್ ನಿರ್ಮಾಣ ಮಾಡುವ ಸಂಬಂಧ ಈಗಾಗಲೇ ಅನುಮತಿ ಸಿಕ್ಕಿದ್ದರೂ ಕೆಲಸ ಆರಂಭವಾಗಿಲ್ಲ ಎಂದು ಆರೋಪಿಸಿದರು. ತಕ್ಷಣಕ್ಕೆ ಪಾಲಿಕೆಗೆ ಸೇರಿದ ಈ ಜಾಗಕ್ಕೆ ಒಂದು ವಾರದೊಳಗೆ ತಂತಿಬೇಲಿ ಹಾಕುವಂತೆ ಉಪ ಮಹಾಪೌರರು ಅಧಿಕಾರಿಗಳಿಗೆ ಆದೇಶಿಸಿದರು.

ವಿಲ್ಸನ್‌ಗಾರ್ಡನ್‌ನಲ್ಲಿರುವ ವಿದ್ಯುತ್ ಚಿತಾಗಾರಕ್ಕೆ ಭೇಟಿ ನೀಡಿ, ಶವಗಳನ್ನು ಸುಟ್ಟನಂತರ ಬೂದಿಯನ್ನು ಸಂಗ್ರಹಿಸಿ ಇಡುವ ಕೋಣೆಯನ್ನು ಪರಿಶೀಲಿಸಿದರು. ಮೃತರ ಸಂಬಂಧಿಗಳು ವಿದೇಶದಲ್ಲಿ ವಾಸವಾಗಿದ್ದರೆ ತಕ್ಷಣಕ್ಕೆ ಬೂದಿ ಪಡೆಯಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ಸಂಗ್ರಹಣಾ ಕೋಣೆಯಲ್ಲಿನ ವ್ಯವಸ್ಥೆಯಿಂದ ಹಲವು ದಿನಗಳ ನಂತರವು ಮೃತರ ಸಂಬಂಧಿಗಳಿಗೆ ಬೂದಿಯನ್ನು ಒದಗಿಸಲಾಗುವುದೆಂದು ಅಧಿಕಾರಿಗಳು ತಿಳಿಸಿದರು.

ನಂತರ ಪಕ್ಕದಲ್ಲಿನ ಸ್ಮಶಾನಕ್ಕೆ ಭೇಟಿ ನೀಡಿ, ಸಮಾಧಿಗಳ ಸುತ್ತಮುತ್ತ ಎತ್ತರವಾಗಿ ಬೆಳೆದ ಹುಲ್ಲನ್ನು ಕೂಡಲೇ ತೆಗೆಸಲು ಕ್ರಮ ಕೈಗೊಳ್ಳಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಮಹಾಪೌರರು ಸೂಚಿಸಿದರು.

ವಾರ್ಡ್ ನಂ.145ರ ಹೊಂಬೇಗೌಡನಗರಕ್ಕೆ ಭೇಟಿ ನೀಡಿದಾಗ, ಸ್ಥಳೀಯ ಪಾಲಿಕೆ ಸದಸ್ಯರಾದ ಶ್ರೀ ಡಿ. ಚಂದ್ರಪ್ಪ ರವರು ತಮ್ಮ ವಾರ್ಡ್‌ನ ಹಲವಾರು ಪ್ರದೇಶಗಳಲ್ಲಿ ಭಾರಿ ಮಳೆಯಾದಾಗ ರಸ್ತೆಬದಿಯ ಮೋರಿಗಳು ತುಂಬಿಕೊಂಡು ನೀರು ಸಾರ್ವಜನಿಕರ ಮನೆಗಳಿಗೆ ನುಗ್ಗುತ್ತಿದೆ. ಆದ್ದರಿಂದ ಕೂಡಲೇ ಮೋರಿಗಳಿಂದ ಹೂಳನ್ನು ತೆರವುಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮಹಾಪೌರರಲ್ಲಿ ಕೋರಿದರು. ಅದಕ್ಕೆ ಸ್ಪಂಧಿಸಿದ ಮಹಾಪೌರರು ಕೂಡಲೇ ಮೋರಿಗಳಿಂದ ಹೂಳನ್ನು ತೆರವುಗೊಳಿಸಲು ಸಂಬಂಧಪಟ್ಟ ಅಭಿಯಂತರರಿಗೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯರಾದ ಕುಮಾರಿ ಅವ್ವಾಯಿ ಹಾಗೂ ಪಾಲಿಕೆಯ ಅಧಿಕಾರಿಗಳು ಹಾಗೂ ಸ್ಥಳೀಯ ಗಣ್ಯವ್ಯಕ್ತಿಗಳು ಉಪಸ್ಥಿತರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 21.09.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಹಯೋಗದೊಂದಿಗೆ ಹಲಸೂರಿನ (Madras Engineering Group) ಎಂ.ಇ.ಜಿ. ಸೆಂಟರ್ ಆವರಣದಲ್ಲಿ ಒಂದು ಸಾವಿರ ಸಸಿಗಳನ್ನು ನೆಡಲಾಯಿತು.

ಇಂದು ಬೆಳಿಗ್ಗೆ 11.00 ಗಂಟೆಗೆ ಎಂ.ಇ.ಜಿ. ಸೆಂಟರ್ ಆವರಣದಲ್ಲಿ ಸಸಿ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಈ ಸಂದರ್ಭದಲ್ಲಿ ಕಮಾಂಡೆಂಟ್ ಶ್ರೀ ಪ್ರಧಾನ್ ರವರು ಮಾತನಾಡಿ, ನಮ್ಮ ಆವರಣದಲ್ಲಿ ಸುಮಾರು 6000 ಸಸಿಗಳನ್ನು ನೆಡುವಷ್ಟು ಸ್ಥಳಾವಕಾಶ ಲಭ್ಯವಿದೆ. ಪಾಲಿಕೆಯಿಂದ ಸಸಿಗಳನ್ನು ಒದಗಿಸಲಾಗಿದ್ದು, ಮಿಲಿಟರಿ ಸಿಬ್ಬಂದಿಯವರ ಸಹಾಯದಿಂದ ಎರಡು ದಿನಗಳಲ್ಲಿ ಎಲ್ಲಾ ಸಸಿಗಳನ್ನು ನೆಡಲಾಗುವುದು ಮತ್ತು ಪಾಲಿಕೆಯ ಈ ಒಂದು ಪರಿಸರ ರಕ್ಷಣೆ ಕಾರ್ಯದಲ್ಲಿ ನಾವು ಸಂಪೂರ್ಣ ಸಹಕಾರ ನೀಡಲು ಸಿದ್ದರಿದ್ದೇವೆ ಎಂದು ತಿಳಿಸಿದರು.

ಈಗಾಗಲೇ ಪಾಲಿಕೆ ಉದ್ಯಾನವನ, ಆಟದ ಮೈದಾನ, ಕಛೇರಿಗಳ ಆವರಣ ಮತ್ತು ವಿಶಾಲವಾದ ಖಾಲಿ ನಿವೇಶನಗಳಲ್ಲಿ ಈ ವರ್ಷದಲ್ಲಿ ವ್ಯಾಪಕವಾಗಿ ಸಸಿಗಳನ್ನು ನೆಡುವ ಕಾರ್ಯ ಹಮ್ಮಿಕೊಂಡಿದೆ. ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಏರ್‌ಫೋರ್ಸ್ ಮತ್ತು ಮಿಲಿಟರಿ ವಿಭಾಗಗಳ ಮುಖ್ಯಸ್ಥರೊಂದಿಗೆ ಚರ್ಚೆ ಮಾಡಲಾಗಿದ್ದು, ಅಕ್ಟೋಬರ್ ತಿಂಗಳವರೆಗೂ ಸಸಿ ನೆಡುವ ಕಾರ್ಯ ಮುಂದುವರೆಸಲಾಗುವುದೆಂದು ಪಾಲಿಕೆ ಆಯುಕ್ತರಾದ ಶ್ರೀ ಸಿದ್ದಯ್ಯ ರವರು ತಿಳಿಸಿದರು.

ಎಂ.ಇ.ಜಿ. ಸೆಂಟರ್ ಸುತ್ತಲು 2 ಕಿ.ಮೀ. ವ್ಯಾಪ್ತಿಯಲ್ಲಿ ಬರುವ ರಸ್ತೆಗಳಲ್ಲಿ ರಸ್ತೆಗುಂಡಿಗಳನ್ನು ಮುಚ್ಚುವ ಜವಾಬ್ದಾರಿ ಎಂ.ಇ.ಜಿ. ಕೇಂದ್ರ ವಹಿಸಿಕೊಂಡಿದೆ. ಅದಕ್ಕೆ ಅವಶ್ಯಕವಾದ material ಪಾಲಿಕೆಯಿಂದ ಒದಗಿಸಬೇಕು. ಮತ್ತು ಎಂ.ಇ.ಜಿ. ಸೆಂಟರ್ ರವರು ತಮ್ಮ Manpower ಬಳಸಿಕೊಂಡು ರಸ್ತೆಗಳನ್ನು ನಿರ್ವಹಣೆ ಮಾಡಲು ಎಂ.ಇ.ಜಿ. ಸಂಸ್ಥೆಯವರು ಒಪ್ಪಿಕೊಂಡಿದ್ದಾರೆಂದು ಪಾಲಿಕೆ ಆಯುಕ್ತರಾದ ಶ್ರೀ ಸಿದ್ದಯ್ಯ ರವರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**